O.S 280/2017

ಪಿ.ಡಬ್ಲೂ-**1**

ದಿನಾಂಕ:**25.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ V.K. ವಕೀಲರಿಂದ:**

ಚನ್ನೇಗೌಡ ಬಿನ್ ದೊಡ್ಡೇಗೌಡ ನಿಮ್ಮ ಅಣ್ಣ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾವ ಸ್ವತ್ತಿಗೆ ಕೋರಿ ಹೂಡಿರುತ್ತೇನೆಂದು ತಿಳಿದುಕೊಂಡಿರುತ್ತೇನೆ. ದಾವಾ ತಪಶೀಲು ಆಸ್ತಿ ಸಂ.1, 1ನೇ ಪ್ರತಿವಾದಿಗೆ ಸರ್ಕಾರದಿಂದ ಸಾಗುವಳಿಯಾಗಿ ಸ್ವಯಾರ್ಜಿತವಾಗಿ ಬಂದಂತಹ ಜಮೀನು ಎಂದರೆ ಸುಳ್ಳು. ಅಂದಿನಿಂದ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆಂದರೆ ಸುಳ್ಳು. ತದನಂತರ 1ನೇ ಪ್ರತಿವಾದಿ 2ನೇ ಪ್ರತಿವಾದಿಗೆ ಸದರಿ ಆಸ್ತಿಯ ಸಂಬಂಧ ಮರಣ ಶಾಸನ ಮಾಡಿರುತ್ತಾರೆಂದರೆ ಸುಳ್ಳು. ದಾವಾ ತಪಶೀಲು ಆಸ್ತಿ ಸಂ.1, 1ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಸಾಕ್ಷಿ ನಮ್ಮ ತಾತ ಸಾಗುವಳಿ ಮಾಡುತ್ತಿದ್ದರು, ತದನಂತರ ನನ್ನ ತಂದೆ ನಂತರ ನಾನು ಸಾಗುವಳಿ ಮಾಡಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ತಾತ, ನಮ್ಮ ತಂದೆ ಮೃತಪಟ್ಟಿರುತ್ತಾರೆ, ಆದಕಾರಣ ನಾನು, ನಮ್ಮ ಅಕ್ಕ-ತಂಗಿಯರು 1ನೇ ಪ್ರತಿವಾದಿಯ ಹೆಸರಿಗೆ ಸಾಗುವಳಿ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಜೊತೆ ಚನ್ನೇಗೌಡ ಬಿನ್ ದೊಡ್ಡೇಗೌಡ ಎಂಬ ಅಣ್ಣ ಜನಿಸಿರುತ್ತಾರೆ, ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸುಳ್ಳು. ಸದರಿಯವರನ್ನು ಈ ದಾವೆಯಲ್ಲಿ ಸೇರಿಸದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ವಾದ ಪತ್ರದ 5ನೇ ಪ್ಯಾರಾದ 10ನೇ ಸಾಲಿನಲ್ಲಿ ದಾವಾ ಆಸ್ತಿಗಳಲ್ಲಿ ನನಗೂ 1/5 ಭಾಗಾಂಶದ ಹಕ್ಕು ಇದೆ ಎಂದು ಒಪ್ಪಿಕೊಂಡಿರುತ್ತಾರೆಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. 1/5 ಎಂದು ಬರೆಸಿದ್ದು, ನಮ್ಮ ಅಣ್ಣನಾದ ಚನ್ನೇಗೌಡ ಬಿನ್ ದೊಡ್ಡೇಗೌಡ ರವರಿಗೂ ಒಂದು ಭಾಗ ಇದೆ ಎಂದು ಆ ರೀತಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಬರೆಯಿಸಿ ಭಾಗ ನೀಡಬೇಕಾಗುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಲು ತೊಂದರೆ ಇಲ್ಲ

ಎಂದರೆ ಸಾಕ್ಷಿ ಅವರಿಗೂ, ನಮಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ದಾವಾ ತಪಶೀಲು ಆಸ್ತಿ ಸಂ.1, 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾದ್ದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.